ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಇದು ಕುಡಿಯುವ ನೀರಿನ ವಿಚಾರ ಆಗಿರುವುದರಿಂದ ಮಾನ್ಯ ಸಚಿವರಿಂದ ಉತ್ತರವನ್ನು ಕೊಡಿಸಬೇಕಾಗುತ್ತದೆ.

ಅಧ್ಯಕ್ಷರು:– ಮಾನ್ಯ ಸಚಿವರಿಂದ ಒಂದು statement ಕೊಡಿಸಿ.

12. ವಿಷಯ: ಕುಡಿಯುವ ನೀರಿನ ಸಂಬಂಧಿಸಿದಂತೆ.

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):– ಮಾನ್ಯ ಸಭಾಧ್ಯಕ್ಷರೆ, 2009ರಲ್ಲಿ ನಮ್ಮ ಕಡೂರು ಮತ್ತು ಬೀರೂರು ಪಟ್ಟಣಕ್ಕೆ ಭದ್ರಾ ಕುಡಿಯುವ ನೀರಿನ ಯೋಜನೆ ಬಂತು. ಇದಕ್ಕಾಗಿ ಸುಮಾರು 36 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಇತ್ತು. ಈಗ ನಾವು 2015ಕ್ಕೆ ಬಂದಿದ್ದೇವೆ. ಅಂದಾಜು ವೆಚ್ಚ 36 ಕೋಟಿ ರೂಪಾಯಿಗಳೂ ಇದ್ದದ್ದು 45 ಕೋಟಿ ರೂಪಾಯಿಗಳಾಗಿ ಈಗ 49 ಕೋಟಿ ರೂಪಾಯಿಗಳಿಗೆ ತಲುಪಿದೆ. ಇದುವರೆಗೂ ಕುಡಿಯುವ ನೀರಿನ ಕೆಲಸ ಆಗಿರುವುದಿಲ್ಲ. ಪೈಪ್‌ಗಳೆಲ್ಲವೂ ಒಡೆದುಕೊಂಡು ಹೋಗಿದೆ. ಆಳವಾಗಿ ತೋಡಿರುವುದಿಲ್ಲ. ಇಲ್ಲಿ ಅಕ್ರಮ ಮತ್ತು ಅವ್ಯವಹಾರಗಳು ಆಗಿವೆ. ಕಳಪೆ ಕಾಮಗಾರಿ ಕೆಲಸ ಆಗಿದೆ. ಕಳಪೆ ಸಾಮಗ್ರಿಗಳು ವಿತರಣೆಯಾಗಿದೆ. ಸಂಬಂಧಪಟ್ಟವರು ಯಾವ ಅಧಿಕಾರಿಗಳು ಇದ್ದಾರೋ, ಯಾರು ಜನಪ್ರತಿನಿಧಿಗಳೂ ಇದ್ದಾರೋ, ಇದಕ್ಕೆ ಕಾರಣಕರ್ತರು ಯಾರು? ಇಷ್ಟು ಹಣವು waste ಆಗಿದೆ. 36 ಕೋಟಿ ರೂಪಾಯಿಗಳಿದ್ದದ್ದು 49 ಕೋಟಿ ರೂಪಾಯಿಗಳಿಗೆ ತಲುಪಿದೆ. ಇದುವರೆಗೂ ಕಡೂರು ಟೌನ್‌ಗೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗುತ್ತಿಲ್ಲ. ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ, ಈ ಹಣವನ್ನು ಹೊಡೆದುಕೊಂಡು ಹೋಗಿದ್ದಾರೆ, ಕಳಪೆ ಪೈಪ್ ಹಾಕಿದ್ದಾರೆಯೇ ಈ ಪೈಪ್ ಹಾಕುವುದಕ್ಕೆ approval ಇತ್ತಾ, ಈ ಬಗ್ಗೆ ಸಮಗ್ರ ತನಿಖೆಯಾಗಬೇಕೆಂಬ ಬಗ್ಗೆ ನನ್ನ ಒತ್ತಾಯವಿದೆ. ಬೇಗ ಕುಡಿಯುವ ನೀರನ್ನು ಒದಗಿಸಿಕೊಡಬೇಕು. ತಪ್ಪು ಮಾಡಿರುವವರಿಗೆ ಶಿಕ್ಷೆಯಾಗಬೇಕು ಮತ್ತು ನೀರು ಒದಗಿಸಿಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಮಗ್ರವಾದ ವರದಿಯನ್ನು ನಾನು ಸಂಬಂಧಪಟ್ಟ ಸಚಿವರಿಂದ ಕೊಡಿಸಿಕೊಡುತ್ತೇನೆ.

ಅಧ್ಯಕ್ಷರು:– ಆಯಿತು. ಮಾನ್ಯ ಚಲುವರಾಯಸ್ವಾಮಿಯವರೆ ತಾವು ಕೇಳಿ.

13. ವಿಷಯ: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರುಗಳ ಬೇಡಿಕೆಯನ್ನು ಈಡೇರಿಸುವ ಬಗ್ಗೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):– ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರುಗಳ ಬೇಡಿಕೆಯನ್ನು ಈಡೇರಿಸುವ ಸಲುವಾಗಿ ರಾಜ್ಯಾದ್ಯಂತ ಧರಣಿಯನ್ನು ಮಾಡುತ್ತಿದ್ದಾರೆ. ಅವರುಗಳ ಸಮಸ್ಯೆಯ ಬಗ್ಗೆ ದಯಮಾಡಿ ಸರ್ಕಾರವು serious ಆಗಿ ಗಮನಹರಿಸಿ salary ಯನ್ನು ಹೆಚ್ಚು ಮಾಡುವಂತಹದ್ದು ಆಗಬೇಕೆಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಸಚಿವರಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು:– ಸಚಿವರೆ, ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಯ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈ ಸಂಬಂಧ ಉತ್ತರ ರೆಡಿ ಇದೆಯಾ?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನ ಹಾಗೂ ಹಿರಿಯ ನಾಗರೀಕ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಸಂಬಂಧ ಉತ್ತರ ರೆಡಿ ಇದೆ. ಅಂಗನವಾಡಿ ಕಾರ್ಯಕರ್ತೆಯರ ಮಾಸಿಕ ವೇತನ ಏರಿಸುವುದು ಮತ್ತು ಅಂಗನವಾಡಿಗಳನ್ನು ಖಾಸಗೀಕರಣ ಮಾಡಬಾರದೆಂಬ ವಿಷಯಗಳ ಬಗ್ಗೆ ಅವರುಗಳು ಪ್ರತಿಭಟನೆಯನ್ನು ಮಾಡುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ.